ಮಕ್ಕಳು ಏನಂದುಕೊಂಡರು ಗೊತ್ತೆ? ತಂದೆಯ ತಂಗಿ ಸದಾ ಇಲ್ಲೇ ಇರಲಿ ಅಂತ. ಎಲ್ಲರೂ ಸಂತೋಷಪಡುತ್ತಿದ್ದಾರೆ.

* * *

ಸ್ಮಶಾನದ ನಡುಗಡ್ಡೆ.

ಅಲ್ಲಿರುವ ಜೋಡಿ ಸಮಾಧಿಗಳ ಮೇಲೆ ಕಂಬನಿ ಮಿಡಿಯುತ್ತಾ ರಾಮಯ್ಯ ಒರಗಿರುವಾಗ ಅಲ್ಲಿಗೆ ಆ ಊರಿನ ಶ್ರೀಮಂತ ರಾಜಾರಾಯ ಬಂದ. ಅವರಿಬ್ಬರು ಪರಸ್ಪರ ದೃಷ್ಟಿ ಬೆರೆಸಿದರು. ರಾಜಾರಾಯ 'ರಾಮಯ್ಯ... ನಿನ್ನ ಇಬ್ಬರು ಮಕ್ಕಳು ಅವರಾಗಿಯೇ ಸಾವನ್ನು ಸ್ವಾಗತಿಸಿದರು'. ಕಣ್ಣುಗಳು ಸಂಕುಚಿತಗೊಂಡವು. ಮುಷ್ಟಿ ಬಿಗಿಯಿತು.

ರಾಜಾರಾಯ, 'ನಿನ್ನ ಮಗ ನನ್ನ ರಹಸ್ಯವನ್ನು ಬಯಲು ಮಾಡಲು ಪ್ರಯತ್ನಿಸಿದ. ನಿನ್ನ ಮಗಳು ನನ್ನ ಮಗನ ಮನಸ್ಸನ್ನು ಕೆಡಿಸಿದಳು...'

ರಾಮಯ್ಯ ಕೋಪವನ್ನು ನುಂಗುತ್ತಾ... `ಅಂದರೆ...'

`ಅಂದರೆ... ನಿನ್ನ ಮಕ್ಕಳಿಗೆ ಸಾವಿನ ಶಿಕ್ಷೆಯನ್ನು ನೀಡಿದ್ದು ನಾನೇ...'

ಈ ಅನುಮಾನ ರಾಮಯ್ಯನಿಗಿತ್ತು. ಈಗ ಅದು ಪರಿಹಾರವಾಯಿತು.

ರಾಜಾರಾಯ ಉಡಾಫೆಯಿಂದಲೇ `ಮಾಂತ್ರಿಕ ರುದ್ರನಾಗನಿಗೆ ಲಕ್ಷ ನೀಡಿ ಕೆಲಸ ಮಾಡಿಸಿದ್ದೇನೆ.'

ಪ್ರತಿಕ್ರಿಯೆ ನೀಡಲಿಲ್ಲ.

ರಾಜಾರಾಯ `ನನಗೆ ನಿನ್ನ ಮೇಲೆ ಯಾವ ರೀತಿಯ ದ್ವೇಷವೂ ಸಹ ಇಲ್ಲ... ನೀನು ಈ ಊರಿನಲ್ಲಿ ಮೊದಲಿನಂತೆ ಜೀವನ ನಡೆಸಬಹುದು' ಎಂದು ದೊಡ್ಡ ಪಾಳೆಯಗಾರನಂತೆ ಹೇಳಿದ.

ಉದಾಸೀನ... ಉಡಾಫೆ...

ಸದಾ ಹಸಿರು ಗಿಡಗಳ ನಡುವೆ ಇರುವ ರಾಮಯ್ಯ ತನ್ನನ್ನು ಏನು ಮಾಡಿಯಾನು ಎಂಬ ಉಡಾಫೆ. ಸಮಾಧಿಯ ಮೇಲೆ ತಲೆಯಿರಿಸಿ ಮಲಗಿದ್ದ ರಾಮಯ್ಯ ಹೊರಳಿದ.

ಕಂಬನಿ ತುಂಬಿಕೊಂಡಿರುವ ಕಣ್ಣುಗಳಲ್ಲಿ ಈಗ ಕೋಪದ ಕೆಂಪು ಛಾಯೆ ಕಂಡುಬರುತ್ತಿದೆ. ಅದರೊಂದಿಗೆ ಸೇಡು. ಹಾವಿನಂತೆ ಬುಸುಗುಡುತ್ತಿದ್ದಾನೆ.

* * *

ರಸಬಾಳೆ ಮತ್ತು ಚಂದ್ರಬಾಳೆ ಎಂದರೆ ತಂಗಿ ಅರುಂಧತಿಗೆ ತುಂಬಾ ಆಸೆ. ಎರಡು ಗೊನೆಗಳನ್ನು ಯಾರೋ ಒಡಪಾಯಿ ಹೊತ್ತುಕೊಂಡು ಬರುತ್ತಿದ್ದಾನೆ. ಅವನ ಜೊತೆ ರುದ್ರನಾಗ. ರುದ್ರನಾಗ ರಸ್ತೆಯಲ್ಲಿ ಬರುತ್ತಿದ್ದರೆ ಊರಿನ

